**ಶ್ರೀ ಸಂಜೀವ್ ಕುಮಾರ್**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು



ಪ್ರಿಯ ಬಂಧುಗಳೇ,

ಗ್ರಾಮ ಸ್ವರಾಜ್ಯದ ಕನಸು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಪರಿಕಲ್ಪನೆಯಾಗಿರುವುದು ನಮಗೆಲ್ಲಾ ತಿಳಿದ ವಿಷಯವಾಗಿದೆ. ಸರ್ವಶಕ್ತ, ಸಧೃಡ, ಸುಸ್ತಿರ ಗ್ರಾಮಗಳ ನಿರ್ಮಾಣ ಇದರ ಹಿಂದಿನ ಮಹತ್ವದ ಆಶಯ. ಸ್ವಾತಂತ್ರಾನಂತರದಲ್ಲಿ ಈ ಪರಿಕಲ್ಪನೆಯನ್ನು ಆಧರಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಮಟ್ಟದ ಜನತಾಣಗಳ ಹಾಗೂ ಬಡಮಟ್ಟದ ಜನರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನುಷ್ಠಾನ ಮಾಡಿಕೊಂಡು ಬರಲಾಗುತ್ತಿದೆ.

ಈ ಕಾರ್ಯಕ್ರಮಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದರೂ ಕೂಡ ನಿರೀಕ್ಷಿತ ಅಭಿವೃದ್ಧಿಯ ನೆಲೆಯಲ್ಲಿ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲಾಗಿಲ್ಲವೆಂಬುದು ವಾಸ್ತವ. ಈ ಹಿನ್ನೆಲೆಯಲ್ಲಿ ಕರ್ನಾಟಕವು ಏಕೀಕರಣಗೊಂಡು 50 ವರ್ಷಗಳು ತುಂಬಿದ ಕಾಲಘಟ್ಟದಲ್ಲಿ ಸುವರ್ಣ ಮಹೋತ್ಸವ ಸಂಭ್ರಾಮಾಚರಣೆಯ ಸಂದರ್ಭದಲ್ಲಿ ಸರ್ಕಾರವು ರಾಜ್ಯವಲಯದ ಅನುದಾನದಡಿಯಲ್ಲಿ ಗ್ರಾಮಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಸುವರ್ಣ ಗ್ರಾಮೋದಯ ಯೋಜನೆಯನ್ನು ರೂಪಿಸಲಾಗಿತ್ತು.

ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದ 2006ರಿಂದ ಮೊದಲನೇ ಹಂತದಲ್ಲಿ ಅಂದಾಜು ರೂ.1000.60 ಕೋಟಿಗಳ ವೆಚ್ಚದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ 1204 ಗ್ರಾಮಗಳನ್ನು ಆಯ್ಕೆ ಮಾಡಿ, ಅನುಷ್ಠಾನಗೊಳಿಸಿ 2010ರ ಜೂನ್ ಅಂತ್ಯಕ್ಕೆ ಬಹುತೇಕ ಮುಕ್ತಾಯಗೊಳಿಸಲಾಗಿದೆ. 2ನೇ ಹಂತದಲ್ಲಿ ಅತ್ಯಂತ ಹಿಂದುಳಿದ ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಲ್ಲಿ ಅಂದಾಜು ರೂ.208.20 ಕೋಟಿಗಳ ವೆಚ್ಚದಲ್ಲಿ 222 ಗ್ರಾಮಗಳನ್ನು, ಮೂರನೇ ಹಂತದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಂದಾಜು ರೂ.1012.05 ಕೋಟಿಗಳ ವೆಚ್ಚದಲ್ಲಿ 1574 ಗ್ರಾಮಗಳನ್ನು ಮತ್ತು 4ನೇ ಹಂತದಲ್ಲಿ ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಲ್ಲಿ ಅಂದಾಜು ರೂ.214.09 ಕೋಟಿಗಳ ವೆಚ್ಚದಲ್ಲಿ 381 ಗ್ರಾಮಗಳನ್ನು ಆಯ್ಕೆ ಮಾಡಿ ಕಾರ್ಯಕ್ರಮವನ್ನು ಜಾರಿಗೆ ತಂದು ಅನುಷ್ಠಾನ ಕಾರ್ಯ ಕೈಗೊಳ್ಳಲಾಗಿದೆ.

ಪ್ರಸ್ತುತ 2012–13ನೇ ಸಾಲಿನಿಂದ ರಾಜ್ಯದ್ಯ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ಅನುಷ್ಠಾನ ಮಾಡಲು ಈಗಾಗಲೇ ಸರ್ಕಾರಿ ಆದೇಶ ಹಾಗೂ ಸುತ್ತೋಲೆಗಳು ನಿಮಗೆ ತಲುಪಿಸಲಾಗಿದೆ. ಕಾರ್ಯನುಷ್ಠಾನದಲ್ಲಿ ತೊಡಗಿಸಿಕೊಂಡ ಎಲ್ಲರಿಗೂ ಇನ್ನಷ್ಟು ಸುಲಲಿತವಾಗುವಂತೆ ಸಮಗ್ರ ಮಾಹಿತಿಗಳನ್ನೊಳಗೊಂಡ ವಿವರಗಳನ್ನು ಸುವರ್ಣ ಗ್ರಾಮೋದಯ ಕಾರ್ಯಾಚರಣೆ ಕೈಪಿಡಿಯಲ್ಲಿ ಅಳವಡಿಸಿ ಹೊರತರಲಾಗಿದೆ. ಈ ಕೈಪಿಡಿಯು ನಿಮಗೆ ಮಾರ್ಗದರ್ಶಿಯಾಗಿ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯು ಯಶಸ್ವಿ ಅನುಷ್ಠಾನದತ್ತ ಸಾಗಿ ಯೋಜನೆಯ ಫಲಶೃತಿ ಜನರಿಗೆ ದೊರಯುವಂತಾಗಲಿ ಎಂದು ಆಶಿಸುತ್ತೇನೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ನಿರೀಕ್ಷಿಸುತ್ತೇನೆ.

ಶ್ರೀ ಸಂಜೀವ್ ಕುಮಾರ್
20/7/12

ಡಾ॥ ಶಾಲಿನಿ ರಜನೀಶ್, ಐ.ಎ.ಎಸ್.,
ಸರ್ಕಾರದ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು



ಪ್ರಿಯ ಬಂಧುಗಳೇ,

ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದ ಕಾರ್ಯಕ್ರಮವನ್ನು 2012–13ನೇ ಸಾಲಿನ ಬಜೆಟ್ ಆಯವ್ಯಯದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸುಮಾರು 1000 ಗ್ರಾಮಗಳನ್ನು ಆಯ್ಕೆ ಮಾಡಿ ರೂ.1000.60 ಕೋಟಿಗಳ ಅನುದಾನದಲ್ಲಿ ಅಭಿವೃದ್ಧಿಗೊಳಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012,ಬೆಂಗಳೂರು, ದಿನಾಂಕ:29.06.2012ರಲ್ಲಿ ಅನುಷ್ಠಾನಕ್ಕೆ ತರಲು ಆದೇಶವನ್ನು ಮತ್ತು ಈ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿ ಮಾನದಂಡಗಳ ಬಗ್ಗೆ ಸರ್ಕಾರಿ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012,ಬೆಂಗಳೂರು, ದಿನಾಂಕ:04.07.2012ರಲ್ಲಿ ಹೊರಡಿಸಿದವುಗಳನ್ನು ಸಂಬಂಧಪಟ್ಟ ಎಲ್ಲರಿಗೂ ತಲುಪಿಸಲಾಗಿರುವುದು ಸ್ವಯಂವೇದ್ಯ.

ಸುವರ್ಣ ಗ್ರಾಮೋದಯ ಯೊಜನೆಯ 5ನೇ ಹಂತದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಪ್ರಕ್ರಿಯೆಯಿಂದ ಗ್ರಾಮವು ಹೊಸ ಮಾದರಿಯಲ್ಲಿ ಅಭಿವೃದ್ಧಿಯಾಗಬೇಕು. ಅನುಷ್ಠಾನಗೊಳಿಸುವ ಕಾಮಗಾರಿಗಳನ್ನು ಗುಣಾತ್ಮಕ ನೆಲೆಯಲ್ಲಿ ಅಭಿವೃದ್ಧಿಗೊಳಿಸಲು ಅನುಷ್ಠಾನಾಧಿಕಾರಿಗಳು ಕಾರ್ಯಮುಖರಾಗಬೇಕು. ತನ್ಮೂಲಕ ಇಡೀ ಗ್ರಾಮದ ಪರಿಸರ ಸ್ವಚ್ಛ ಹಾಗೂ ನೈರ್ಮಲ್ಯತೆಯನ್ನು ಪಡೆದುಕೊಂಡು ಅಭಿವೃದ್ಧಿಗೆ ಹೊಸ ಅರ್ಥ ತರುವಂತಾಗಬೇಕು.

ಅಭಿವೃದ್ಧಿಗೆ ಹೊಸ ಅರ್ಥವನ್ನು ಕಟ್ಟಿಕೊಡುವಲ್ಲಿ ಸರ್ಕಾರಿ ಅಧಿಕಾರಿ ಸಿಬ್ಬಂದಿಗಳು ಭಾಗವಹಿಸಿದರಷ್ಟೇ ಸಾಲದು. ಬದಲಿಗೆ ಇಡೀ ಗ್ರಾಮದ ಅಭಿವೃದ್ಧಿಯ ಸಮೀಕ್ಷೆಯಲ್ಲಿ, ಗ್ರಾಮಕ್ಕೆ ಬೇಕಾದ ಅವಶ್ಯಕತೆಗಳನ್ನು ಗುರುತಿಸುವಲ್ಲಿ ಮತ್ತು ಅವುಗಳನ್ನು ಯೋಜನೆಯ ವರದಿಯಲ್ಲಿ ಅಡಕಗೊಳಿಸುವಲ್ಲಿ ಮತ್ತು ಅನುಷ್ಠಾನದ ಹಂತದಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಕಡ್ಡಾಯಗೊಳಿಸುವುದು. ಗ್ರಾಮದ ಜನರ ಪಾಲ್ಗೊಳ್ಳುವಿಕೆಯಿಂದ ಕಾರ್ಯಕ್ರಮವು ಯಶಸ್ವಿಯಾಗುತ್ತದೆ ಎಂಬುದು ನಿಮ್ಮ ತತ್ವವಾಗಬೇಕು.

ಈ ರೀತಿಯ ಸ್ಪಂದನಶೀಲ ಅನುಷ್ಠಾನದ ನೆಲೆಯಲ್ಲಿ ಅಭಿವೃದ್ಧಿಗೊಂಡ ಗ್ರಾಮಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಯನ್ನು ಕಂಡುಕೊಳ್ಳುತ್ತವೆ. ಈ ತೆರನಾದ ರೀತಿಯಲ್ಲಿ ಅಭಿವೃದ್ಧಿ ಹೊಂದುವ ಗ್ರಾಮಗಳು ನಿಜಕ್ಕೂ ಹೊಸ ಅರ್ಥವನ್ನು ಧಕ್ಕಿಸಿಕೊಳ್ಳುವಲ್ಲಿ ಸಫಲವಾಗುತ್ತವೆ. ಈ ಸಫಲತೆಯ ಅನುಷ್ಠಾನವು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಾಗಬೇಕು.

ಇಂತಹ ಸದುದ್ದೇಶದ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಹೊತ್ತಿರುವ ತಾವುಗಳು ಕಾರ್ಯಕ್ರಮವನ್ನು ಸಕಾಲದಲ್ಲಿ ಜಾರಿಗೆ ತರಲು ಕಾರ್ಯೋನ್ಮುಖರಾಗುವಂತೆ ಒತ್ತಾಯಿಸುತ್ತೇನೆ. ಎಲ್ಲರ ಗ್ರಾಮಾಭಿವೃದ್ಧಿಯ ಆಶಯಗಳು ಸಕಾಲದಲ್ಲಿ ಸಾಕಾರಗೊಂಡಾಗ ಅಭಿವೃದ್ಧಿ ಕಾರ್ಯಕ್ರಮಗಳು ಜನಪರವಾಗುತ್ತವೆ. ಈ ಜನಹಿತದ ಕಾರ್ಯಕ್ರಮಗಳಲ್ಲಿ ತಾವುಗಳೆಲ್ಲರೂ ಸಕ್ರಿಯವಾಗಿ ತೊಡಗಿಕೊಳ್ಳಲು ನಾನು ಆಶಿಸುತ್ತೇನೆ.

ಡಾ।।ಶಾಲಿನಿ ರಜನೀಶ್

**ಬೂವನಹಳ್ಳಿ ನಾಗರಾಜ್,**
ನಿರ್ದೇಶಕರು,
ಸುವರ್ಣ ಗ್ರಾಮೋದಯ ಹಾಗೂ
ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು



ಪ್ರಿಯ ಬಂಧುಗಳೇ,

ಸುವರ್ಣ ಗ್ರಾಮೋದಯ ಯೋಜನೆಯನ್ನು ಈಗಾಗಲೇ ರಾಜ್ಯದ್ಯಂತ ಹಂತ ಹಂತವಾಗಿ ಜಾರಿಗೆ ತಂದಿರುವುದು ಸರಿಯಷ್ಟೇ. ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ 2006–07ರಲ್ಲಿ ಕೈಪಿಡಿಯನ್ನು ಹೊರತರಲಾಗಿದೆ. ಈ ಕೈಪಿಡಿಯಲ್ಲಿ ಯೋಜನೆಯ ಸಮಗ್ರ ಮಾಹಿತಿಯನ್ನು ಅಳವಡಿಸಿ ನೀವುಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ತಿಳಿಸಲಾಗಿತ್ತು. ಸದರಿ ಕೈಪಿಡಿಯಲ್ಲಿ ಹಿಂದಿನ ಆದೇಶ ಮತ್ತು ಸುತ್ತೋಲೆಗಳನ್ವಯ ಸುವರ್ಣ ಗ್ರಾಮೋದಯ ಯೋಜನೆಯನ್ನು ಇತರೇ ಕ್ಷೇತ್ರ ಮಟ್ಟದ ಇಲಾಖೆಗಳ ವಿವಿಧ ಅಭಿವೃದ್ಧಿ ಯೋಜನೆಗಳ ಅನುದಾನವನ್ನು Convergence ಮಾಡಿಕೊಂಡು ಯೋಜನೆಯ ರೂಪುರೇಶೆಗಳನ್ನು ತಯಾರಿಸಿ ಕಾರ್ಯಾನುಷ್ಠಾನ ಮಾಡಲು ತಿಳಿಸಲಾಗಿತ್ತು.

ಆದರೆ ನಂತರದಲ್ಲಿ ಇತರೇ ಕ್ಷೇತ್ರ ಮಟ್ಟದ ಇಲಾಖೆಗಳ ವಿವಿಧ ಅಭಿವೃದ್ಧಿ ಯೋಜನೆಗಳ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಗೆ Convergence ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಸುವರ್ಣ ಗ್ರಾಮೋದಯ ಯೋಜನೆಗೆ ಆಯ್ಕೆಯಾದ ಪ್ರತಿ ಗ್ರಾಮಕ್ಕೆ ರಾಜ್ಯ ವಲಯದಡಿ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ ಆಧರಿಸಿ ನಿಗಧಿಪಡಿಸಿದ ತಲಾನುದಾನ ರೂ.2500ರಂತೆ 4000 ಜನಸಂಖ್ಯೆ ಇರುವ ಗ್ರಾಮಕ್ಕೆ ರೂ.1.00 ಕೋಟಿ ಅನುದಾನವನ್ನು ಒದಗಿಸಲಾಗುತ್ತಿದೆ. ಪ್ರಸ್ತುತ ಇದೇ ಮಾನದಂಡವನ್ನು 2012–13ನೇ ಸಾಲಿನಲ್ಲೂ ಸಹ ಅನುಸರಿಸಲಾಗಿದೆ.

ಈ ಸಾಲಿನಿಂದ ಜಾರಿಗೆ ತರುತ್ತಿರುವ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯ ಅನುಷ್ಠಾನಕ್ಕಾಗಿ ಪರಿಷ್ಕೃತ ಮಾರ್ಗದರ್ಶಿಯನ್ನು ನಿಮಗೆ ಒದಗಿಸಲಾಗುತ್ತಿದೆ. ಈ ಮಾರ್ಗದರ್ಶಿಯಲ್ಲಿ 5ನೇ ಹಂತದ ಯೋಜನೆಗೂ ಅವಶ್ಯವಿರುವ ಸರ್ಕಾರಿ ಆದೇಶಗಳು, ಸುತ್ತೋಲೆಗಳನ್ನು ಅಳವಡಿಸಲಾಗಿದೆ ಮತ್ತು ಅವಶ್ಯವಿರುವ ಈ ಹಿಂದಿನ ಎಲ್ಲಾ ಆದೇಶಗಳನ್ನು ಸಹ ಅಡಕಗೊಳಿಸಿದೆ. ಅಲ್ಲದೇ ಜಿಲ್ಲಾ ಪಂಚಾಯತ್‌ಗಳ ಹಂತದಲ್ಲಿ ಸಂದರ್ಭಾನುಸಾರ ಮತ್ತು ಅಗತ್ಯತೆಗನುಗುಣವಾಗಿ Convergence ಮಾಡಬಹುದಾದ ಇಲಾಖೆಯ ಇತರೇ ಅಭಿವೃದ್ಧಿ ಕಾರ್ಯಕ್ರಮಗಳ ಪರಿಚಯವನ್ನು ಸಹ ಮಾಡಿದೆ. ಈ ಯೋಜನೆಗಳ ಅನುಷ್ಠಾನದ ಬಗ್ಗೆ ಸಂಬಂಧಪಟ್ಟ ಶಾಖೆಯಿಂದ ಹೊರಡಿಸುವ ಆದೇಶ ಮತ್ತು ಸುತ್ತೋಲೆಗಳ ನಿಬಂಧನೆಗೊಳಪಟ್ಟು ಜಾರಿಗೆ ತರುವುದು. ಯೋಜನೆಗೆ ಆಯ್ಕೆ ಮಾಡುವ ಗ್ರಾಮಗಳ ಅಂತಿಮ ಪಟ್ಟಿ, ನಂತರದಲ್ಲಿ ಕಾರ್ಯಕ್ರಮಗಳ ಅನುಷ್ಠಾನದ ಪ್ರಗತಿಯ ವರದಿಗಳನ್ನು ನಿಗದಿತ ಸಮಯದೊಳಗೆ ಸರ್ಕಾರಕ್ಕೆ ಸಲ್ಲಿಸಲು ಕೋರಿದೆ.



**ಬೂವನಹಳ್ಳಿ ನಾಗರಾಜ್**